# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

## ಕ್ರಯಪತ್ರ

(ಮರು ಹಂಚಿಕೆ : ಮರು ಮಂಜೂರಾತಿ)

ಈ ಕ್ರಯಪತ್ರವನ್ನು ಸನ್ ______________ದ ಇಸವಿ________________________ ತಿಂಗಳು ____________________ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಮಾರಾಟಗಾರರು (ಮಾರಾಟಗಾರ ಶಬ್ದವು ಅವರ ಉತ್ತರಾಧಿಕಾರಿಗಳನ್ನು ಹಸ್ತಾಂತರ ಪಡೆದವರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಸಹಾಯಕ ಆಯುಕ್ತರು, ಮರು ಮಂಜೂರಾತಿ ಮತ್ತು ಮರುಹಂಚಿಕೆ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರ (ಖರೀದಿದಾರ ಶಬ್ದವು ಅವರ ವಾರಸುದಾರರನ್ನು ನಿರ್ವಾಹಕರನ್ನು, ಆಡಳಿತಗಾರರನ್ನು ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ

ಮತ್ತು

_________________ಎಂಬಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ___________________________ ಎಂಬುವವರ ಮಗನಾದ/ಮಗಳಾದ / ಹೆಂಡತಿಯಾದ ಸುಮಾರು________________________ವರ್ಷ ವಯಸ್ಸಿನ ಶ್ರೀ/ಶ್ರೀಮತಿ__________________________________________ ಎಂಬುವವರಿಗೆ ಬರೆದುಕೊಟ್ಟ ಕ್ರಮ ಈ ಮುಂದಿನಂತಿದೆ:

ಮಾರಾಟಗಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ಪೂರ್ಣವಾಗದಿ ವಿವರಿಸಿರುವ________ಸಂಖ್ಯೆಯನ್ನು ಹೊಂದಿರುವ ನಿವೇಶನವನ್ನು ಖರೀದಿದಾರರಿಗೆ ಪೂರ್ತಿಯಾಗಿ ಕ್ರಯದ ಮೂಲಕ ಮರು ಹಸ್ತಾಂತರಣ ಮಾಡಿದ್ದಾರೆ

ಖರೀದಿದಾರರು ನಿವೇಶನದ ಪೂರ್ಣ ಬೆಲೆಯಾದ ________________________ ರೂಪಾಯಿಗಳನ್ನು (_________________________________________________________ ರೂಪಾಯಿಗಳನ್ನು) ನಗದಾಗಿ / ಡಿ.ಡಿ. ಸಂಖ್ಯೆ_______________________ದಿನಾಂಕ __________________ ಮಾಲಕ ಪಾವತಿ ಮಾಡಿದ್ದಾರೆ ಮತ್ತು ಮಾರಾಟಗಾರರು ಈ ಮೊತ್ತವನ್ನು ಸ್ವೀಕರಿಸಿರುವುದನ್ನು ಒಪ್ಪಿಕೊಂಡಿದ್ದಾರೆ.

ಮಾರಾಟಗಾರರು ಸಂಪೂರ್ಣವಾಗಿ ಮಾಲೀಕರಾಗಿ ಖರೀದಿದಾರರಿಂದ __________________ ರೂಪಾಯಿಗಳನ್ನು ಸ್ವೀಕರಿಸಿರುವುದರಿಂದ ಷೆಡ್ಯೂಲ್ ನಿವೇಶನದ ವಾಸ್ತವಿಕ ಸ್ವಾಧೀನತೆಯನ್ನು ಖರೀದಿದಾರರಿಗೆ ಈ ಮೂಲಕ ನೀಡಿದ್ದಾರೆಂದು ಮತ್ತು ಎಲ್ಲಾ ಋಣಭಾರಗಳಿಂದ, ಕಾನೂನು ಬದ್ಧ ಹೊರಹಾಕುವಿಕೆಯಿಂದ, ತೆರಿಗೆ ಬಾಕಿಯಿಂದ, ಇತರ ರೀತಿಯ ಯಾವುದೇ ಬಾಕಿಗಳಿಂದ ಹಾಗೂ ಕ್ಲೇಮುಗಳಿಂದ ಮುಕ್ತವಾಗಿರುವ ಸದರಿ ಸ್ವತ್ತಿನ ಯಾವುದೇ ರೀತಿಯ ಎಲ್ಲಾ ಸ್ವಾಧೀನತೆಗಳು, ವಿಶೇಷ ಹಕ್ಕುಗಳು, ಅನುಭೋಗದ ಹಕ್ಕುಗಳು ಮತ್ತು ಉಪಬಂಧದೊಂದಿಗೆ ಷೆಡ್ಯೂಲ್ ನಿವೇಶನದ ಸಂಪೂರ್ಣ ಭಾಗವನ್ನು ಹೊಂದಲು, ಧಾರಣ ಮಾಡಲು ಹಾಗೂ ಅವನ/ಅವಳ ವೈಯುಕ್ತಿಕ ಹಾಗೂ ಸಂಪೂರ್ಣ ಸ್ವತ್ತಾಗಿ ಅನುಭವಿಸಿಕೊಂಡು ಬರಲು ಈ ಕೆಳಕಂಡ ನಿಬಂಧನೆ ಹಾಗೂ ಷರತ್ತುಗಳಿಗೆ ಒಳಪಟ್ಟು ಈ ಮೂಲಕ ಹಸ್ತಾಂತರಣ ಮಾಡಿಕೊಟ್ಟಿರುತ್ತಾರೆಂದು ಈ ಒಡಂಬಡಿಕೆಯು ಸಾಕ್ಷಿಯಾಗಿರುತ್ತದೆ, ಎಂದರೆ:-

1. ಖರೀದಿದಾರರು ಸ್ವತ್ತನ್ನು ``ವಾಸದ ಕಟ್ಟಡವಾಗಿ ಮಾತ್ರ" ಉಪಯೋಗಿಸಬೇಕೆ ವಿನಹ ಯಾವುದೇ ಇತರ ಬಳಕೆಗಾಗಿ ಬಳಸತಕ್ಕದ್ದಲ್ಲ.

2. ಖರೀದಿದಾರರು ಷೆಡ್ಯೂಲ್ ಸ್ವತ್ತಿನಲ್ಲಿ ವಾಸದ ಮನೆಯನ್ನು ನಕ್ಷೆಯ, ವಿನ್ಯಾಸದ ಹಾಗೂ ಕೆಎಂಸಿ ಅಧಿನಿಯಮ, 1976ರ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿರುವ ಉಪವಿಧಿಗಳಿಗೆ ಅನುಸಾರವಾಗಿ ನಿರ್ಮಿಸತಕ್ಕದ್ದು.

## ಷೆಡ್ಯೂಲ್

______________________ ಬಡಾವಣೆಯ ______________________ ಬ್ಲಾಕ್‌ನಲ್ಲಿರುವ ಪೂರ್ವ-ಪಶ್ಚಿಮ ______________________ ಚ.ಅ./ಚ.ಮೀ. ಉತ್ತರ-ದಕ್ಷಿಣ ______________________ ಚ.ಅ./ಚ.ಮೀ. ಅಳತೆಯುಳ್ಳ ನಿವೇಶನ ಸಂಖ್ಯೆ ______________________ ಮತ್ತು ಅದರ ಚಕ್ಕುಬಂದಿ:

ಪೂರ್ವಕ್ಕೆ : ಪಶ್ಚಿಮಕ್ಕೆ :

ಉತ್ತರಕ್ಕೆ : ದಕ್ಷಿಣಕ್ಕೆ :

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಮೇಲೆ ತಿಳಿಸಿದ ದಿನ, ತಿಂಗಳು ಮತ್ತು ವರ್ಷದಂದು ಇದಕ್ಕೆ ತಮ್ಮ ಸಹಿ ಹಾಗೂ ಮುದ್ರೆಯನ್ನು ಹಾಕಿರುತ್ತಾರೆ.

ಸಾಕ್ಷಿದಾರರು :

1.

(ವಿಷಯ ನಿರ್ವಾಹಕ)

2.

(ಸೂಪರಿಂಟೆಂಡೆಂಟ್)

ಸಹಾಯಕ ಆಯುಕ್ತರು,
(ಮರು ಮಂಜೂರಾತಿ ಮತ್ತು ಮರು ಹಂಚಿಕೆ)
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಸಾಕ್ಷಿದಾರರು

1.

2.

ಖರೀದಿದಾರ